ಬಂದಾಗ ನಮಗೆ ಹೊಸ ಬಾಗಿಲುಗಳು ತೆರೆದುಕೊಳ್ಳುತ್ತವೆ. ಬದುಕು–ಬರವಣಿಗೆಗೆ ಹೊಸ ಉತ್ಸಾಹ ದೊರೆಯುತ್ತದೆ. ಪುನಃ ಮನೆಗೆ ಬಂದಾಗ ನಮ್ಮ ಪತ್ನಿ ನಮಗೆ ಮತ್ತಷ್ಟು ಚೆಲುವಾಗಿ ಕಾಣಿಸುತ್ತಾಳೆ. ನಮ್ಮ ಕವಿತೆಯ ಬಗ್ಗೆ ಗೌರವ ಮತ್ತಷ್ಟು ಹೆಚ್ಚಾಗುತ್ತದೆ. ಆಗಾಗ ಹೊರಗಿನ ಜಗತ್ತನ್ನು ನೋಡಿಬರುವುದು ಕವಿಗೆ ಅಗತ್ಯ. ಕಥೆ, ಕಾದಂಬರಿ, ನಾಟಕ – ಯಾವುದು ಬರೆದರೂ ಮತ್ತೆ ಕಾವ್ಯಕ್ಕೇ ಬರುತ್ತೇನೆ. ಗಂಭೀರ ಸಾಹಿತಿಗಳು ಮಕ್ಕಳ ಸಾಹಿತ್ಯ ಬರೆಯುವುದು ದೋಷ ಎಂದು ಭಾವಿಸಿದ್ದ ಸಂದರ್ಭದಲ್ಲಿ ಮಕ್ಕಳ ಸಾಹಿತ್ಯವನ್ನು ಬರೆದೆ. ನನ್ನ 'ಹಕ್ಕಿಸಾಲು' ಸಂಕಲನ ಹಿರಿಯ ಕವಿಗಳಿಗೂ ಇಷ್ಟವಾಯಿತು. ರಾಮಾಯಣ ದರ್ಶನಂ ಬರೆದ ಕವಿ ಬೊಮ್ಮನಹಳ್ಳಿಯ ಕಿಂದರಜೋಗಿಯನ್ನೂ ಬರೆದುದು ನಮ್ಮ ಪರಂಪರೆ. ಬಾಲ್ಯದಲ್ಲಿ ಉಂಟಾದ ಪ್ರಭಾವಗಳು ಬದುಕಿನುದ್ದಕ್ಕೂ ಹಿಂಬಾಲಿಸುವುದರಿಂದ, ಮಕ್ಕಳಿಗೆ ಸಾಹಿತ್ಯ–ಕಲೆಗಳ ಪರಿಚಯ ಮಾಡಿಸುವುದು ಅಗತ್ಯ. ಈ ದೃಷ್ಟಿಯಿಂದ ನಮ್ಮೆಲ್ಲ ಹಿರಿಯ ಲೇಖಕರು ಮಕ್ಕಳಿಗಾಗಿ ಬರೆಯುವುದನ್ನು ಜವಾಬ್ದಾರಿ ಎಂದು ಭಾವಿಸಬೇಕು.

◆ **ಕಲಬುರ್ಗಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ನಿಮಗೆ ದೊರಕಿದ್ದಕ್ಕೆ ಸಾಹಿತ್ಯವಲಯದಲ್ಲಿ ಸಂತೋಷದ ಜೊತೆಗೆ ತಕರಾರು ಕೂಡ ವ್ಯಕ್ತವಾಗಿದೆ. ಈ ತಕರಾರಿಗೆ ಹೇಗೆ ಪ್ರತಿಕ್ರಿಯಿಸುವಿರಿ?**

ಅದನ್ನೆಲ್ಲ ವಿನಯದಿಂದಲೇ ಸ್ವೀಕರಿಸಬೇಕು. ಪುರಸ್ಕಾರ ಅಥವಾ ತಿರಸ್ಕಾರ ಎಲ್ಲವೂ ನಮ್ಮ ಜನ ನಮಗೆ ಕೊಟ್ಟಿರುವಂತಹದ್ದು. ಒಂದು ಪ್ರಿಯವಾದರೆ ಮತ್ತೊಂದೂ ಪ್ರಿಯವಾಗಬೇಕು. ತಾಯಿ ಮಕ್ಕಳನ್ನು ಪ್ರೀತಿಸುವಂತೆ ಬೈಯುವುದನ್ನೂ ಮಾಡುತ್ತಾಳೆ. ಪ್ರತಿಕ್ರಿಯೆಗಳ ಹಿಂದಿನ ಹೃದಯದ ಮಿಡಿತ ನನಗೆ ಬಹಳ ಮುಖ್ಯ.

ಸ್ಥಳೀಯ ಲೇಖಕರನ್ನು ಗುರ್ತಿಸಬೇಕು ಎನ್ನುವುದು ಸಮ್ಮೇಳನದ ಅಧ್ಯಕ್ಷರ ಆಯ್ಕೆಗೆ ಸಂಬಂಧಿಸಿದ ತಕಾರುಗಳಲ್ಲೊಂದು. ಸ್ಥಳೀಯರಿಗೆ ಅಧ್ಯಕ್ಷ ಗೌರವ ಕೊಡಬಾರದು ಎಂದು ಯಾರೂ ಹೇಳಿಲ್ಲ. ಶಿವಮೊಗ್ಗದಲ್ಲಿ ಬೇಂದ್ರೆ, ಧಾರವಾಡದಲ್ಲಿ ಕುವೆಂಪು ಅವರು ಅಧ್ಯಕ್ಷರಾಗಿದ್ದ ಸಂಪ್ರದಾಯ ನಮ್ಮದು. ಶಿವಮೊಗ್ಗದಲ್ಲಿ ಸಮ್ಮೇಳನ ನಡೆದಾಗ ಅಲ್ಲಿಯವರೇ ಅಧ್ಯಕ್ಷರಾಗಬೇಕು ಎನ್ನುವುದು ಸರಿಯಾಗದೇನೋ ಅನ್ನಿಸುತ್ತದೆ. ಬೇಂದ್ರೆ ಕನ್ನಡಕ್ಕೆ ಸಂಬಂಧಿಸಿದಂತೆ, ಮಾಸ್ತಿ ಕನ್ನಡದ ಆಸ್ತಿಯಾದಂತೆ, ಹೋದಿಗೆರೆಯಲ್ಲಿ ಹುಟ್ಟಿದ ನಾನು ಈಗ ಕನ್ನಡಕ್ಕೆ ಸಂಬಂಧಪಟ್ಟವನು. 'ಏಕಾಮಿಷ' ಎನ್ನುವ ಪದವನ್ನು ಕುಮಾರವ್ಯಾಸ ಬಳಸುತ್ತಾನೆ. ಒಂದು ವಸ್ತುವಿನ ಬಗ್ಗೆ ಅನೇಕರಿಗೆ ಅಪೇಕ್ಷೆ ಉಂಟಾಗುವ ಸ್ಥಿತಿಯದು. ಆದರೆ, ಇರುವ ಸ್ಥಾನ ಒಂದೇ.

◆ **ಕಾವ್ಯ ಸಮಾಜದ ಕಣ್ಣೀರು ಒರೆಸಬೇಕು ಎಂದು ಹೇಳಿದಿರಿ. ಆದರೆ, ವರ್ತಮಾನದ ಸಂಕಟಗಳಿಗೆ ನೀವು ಸ್ಪಂದಿಸುವುದಿಲ್ಲ ಎನ್ನುವ ಮಾತಿದೆ.**

ಎಲ್ಲರೂ ಎಲ್ಲ ಮಾತನ್ನೂ ಆಡಬೇಕೆಂದಿಲ್ಲ. ಪಂಪನನ್ನೇ ನಾನು ಓದುವುದಿನ್ನೂ ಇದೆ. ಕುಮಾರವ್ಯಾಸನ ಕುರಿತು ಮಾಡುವ ಕೆಲಸ ಉಳಿದಿವೆ. ಕನ್ನಡ ಸಂಸ್ಕೃತಿ ಕ್ಷೇತ್ರದಲ್ಲಿ ಬೀಜ ಬಿತ್ತಬೇಕಾದ ಸಾಕಷ್ಟು ಕ್ಷೇತ್ರಗಳು ಖಾಲಿ ಉಳಿದಿವೆ. ನಿಮ್ಮ ಪ್ರೀತಿಯ ಕ್ಷೇತ್ರದಲ್ಲಿ ನೀವು ಕೆಲಸ ಮಾಡಿಯೇ ಮಾಡುತ್ತೀರಿ. ನನ್ನ ಕ್ಷೇತ್ರ ಬರವಣಿಗೆ. ಬರೆಯುವುದು ನನಗೆ ಅತ್ಯಂತ ಮುಖ್ಯ. ಬರೆಯುವ ಮೂಲಕವೇ ನಾನು ನನ್ನ ಬದ್ಧತೆಯನ್ನು ವ್ಯಕ್ತಪಡಿಸುತ್ತೇನೆ. ನನ್ನ ವಿದ್ಯಾರ್ಥಿಗಳಿಗೆ ಸರಿಯಾಗಿ ಪಾಠ ಮಾಡುವುದು ಮತ್ತೊಂದು ಬಗೆಯ ಕಮಿಟ್‌ಮೆಂಟ್. ಓರ್ವ ನಾಗರಿಕನಾಗಿ ಶುದ್ಧವಾಗಿ ಬದುಕುವುದೂ ಒಂದು ಬಗೆಯ ಕಮಿಟ್‌ಮೆಂಟೇ. ಪ್ರಾಮಾಣಿಕತೆಯನ್ನು ಕಳೆದುಕೊಳ್ಳದಂತೆ ಬದುಕುವುದು,